ಅವರು ಚುಚ್ಚುಮದ್ದಿನಂತೆ ಕೊಟ್ಟಿದ್ದಾರೆ. ಎಲ್ಲವುಗಳ ಶಿಲ್ಪ, ಸಿನಿಮಾ ನಿರೂಪಣೆಯಲ್ಲಿನ ಸಾವಧಾನ ಹಿಡಿದಿಡುತ್ತದೆ. ಎಲ್ಲಿಯೂ ಅವರು ಉಪದೇಶ ಮಾಡಹೋಗಿಲ್ಲ. 'ಸ್ಟೇಟ್‌ಮೆಂಟ್'ಗಳೂ ಸಂದರ್ಭೋಚಿತವಾಗಿವೆ. ಹೇರಿಕೆಯ ಗೊಡವೆಗೆ ಹೋಗದಿರಲು ಅಗತ್ಯವಿರುವ ನಿರ್ಲಿಪ್ತತೆಯನ್ನು ನಿರ್ದೇಶಕರು ರೂಢಿಸಿಕೊಂಡಿರುವುದರಿಂದ ಇದು ಸಾಧ್ಯವಾಗಿದೆಯೇನೋ?

ಸಿನಿಮಾದ ಕಥೆ ಸರಳ. ಆಟಿಸಂ ಸಮಸ್ಯೆ ಇರುವ ಬಾಲಕನನ್ನು ಆತನ ಅಮ್ಮ ಪ್ರತಿಷ್ಠಿತ ಶಾಲೆಗೆ ಸೇರಿಸಿದ್ದಾಳೆ. ಶಾಲೆಯಲ್ಲಿ ಬಾಲಕ ದಿನವೂ ಅವಾಂತರ ಸೃಷ್ಟಿಸುತ್ತಾನೆ. ಅದು ಅವನ ತಪ್ಪಲ್ಲ; 'ಆಟಿಸಂ'ನದ್ದು. ಆ ಬಾಲಕನಿಂದ ಒದೆ ತಿನ್ನುವ, ಕಚ್ಚಿಸಿಕೊಳ್ಳುವ ಬೇರೆ ಮಕ್ಕಳ ಪೋಷಕರು ಸಹಜವಾಗಿಯೇ ಕೋಪಗೊಳ್ಳುತ್ತಾರೆ. ಎಲ್ಲರಂತಿಲ್ಲದ ಆ ಬಾಲಕನನ್ನು ಶಾಲೆಯಿಂದ ಹೊರಗೆ ಓಡಿಸಬೇಕು ಎಂದು ದುಂಬಾಲು ಬೀಳುತ್ತಾರೆ.

ಬಾಲಕ ಮುಗ್ಧ. ಅವನ ತಾಯಿ, ಮಗ ಅದೇ ಪ್ರತಿಷ್ಠಿತ ಶಾಲೆಯಲ್ಲಿ ಓದಬೇಕು ಎಂಬ ಹಟವಾದಿ. 'ಈ ಮಗು ಸರಿಹೋಗದು, ಇನ್ನೊಂದು ಮಗು ಮಾಡಿಕೊಂಡರೆ ಹೇಗೆ' ಎಂಬ ಸಹಜ ಬಯಕೆಯ ತಂದೆ. ಇವರೆಲ್ಲರ ಹೊಯ್ದಾಟದ ಕಥನವನ್ನು 'ಡೆಸ್ಟಿನಿ' ಒಳಗೊಂಡಿದೆ.

ಶಾಲೆಯ ಸಿಬ್ಬಂದಿ ಕೂಡ ಕೆಟ್ಟವರಲ್ಲ. ಅವರಿಗೆ ತಾಯಿಯ ತಾಕಲಾಟ ಅರ್ಥವಾಗುತ್ತದೆ. ಉಳಿದ ಪೋಷಕರ ಆತಂಕಕ್ಕೂ ಬೆಲೆ ಕೊಡಬೇಕಾದ ಸಂದಿಗ್ಧ ಅವರದ್ದು. ಶಾಲೆಯ ಮುಖ್ಯ ಶಿಕ್ಷಕನ ತನಕ ಎಲ್ಲರೂ ಬಾಲಕನಿಗೆ ಇನ್ನೊಂದು ಅವಕಾಶ ಕೊಡುವಷ್ಟು ಉದಾರ ಮನಸ್ಸಿನವರು. ಈ ತಾಯಿಯೋ ಬಾಲಕನ ಜತೆ ತಾನೂ ಶಾಲೆಯಲ್ಲಿ ಕುಳಿತು ಯಾರಿಗೂ ಅವನು ತೊಂದರೆ ಮಾಡದಂತೆ ನೋಡಿಕೊಳ್ಳುವ ಮಟ್ಟಕ್ಕೂ ಯೋಚಿಸುತ್ತಾಳೆ. ಆ ದೃಷ್ಟಿಯಿಂದ ಅವಳು ಮಹಾತಾಯಿಯೇ ಹೌದು.

ಬಾಲಕನನ್ನು ಶಾಲೆಯಿಂದ ಆಚೆಗೆ ಹಾಕುವುದು ಅನಿವಾರ್ಯವಾದಾಗಲೂ ತಾಯಿ ಧೃತಿಗೆಡುವುದಿಲ್ಲ. ಅವನ ವಿರುದ್ಧ ದೂರು ಕೊಟ್ಟ ಎಲ್ಲ ಪೋಷಕರ ಮನೆಗಳಿಗೆ ಎಡತಾಕಿ, 'ಇನ್ನೊಂದು ಅವಕಾಶ ಕೊಡಿಸಿ' ಎಂದು ಅಲವತ್ತುಕೊಳ್ಳುತ್ತಾಳೆ. ಅದೂ ವಿಫಲವಾದಾಗ, 'ಪ್ಲಕಾರ್ಡ್' ಹಿಡಿದು 'ಬಾಲಕನಿಗೂ ಶಿಕ್ಷಣದ ಹಕ್ಕು ಕೊಡಿ' ಎಂದು ಸಹಿ ಸಂಗ್ರಹಿಸುವ ಆಂದೋಲನಕ್ಕೂ ಮುಂದಾಗುತ್ತಾಳೆ. ಎಲ್ಲ ವ್ಯರ್ಥ ಹೋರಾಟಗಳೇ ಆದಾಗ ಅವಳು ತಾನೇ 'ಮೆಟ್ರೊ ರೈಲು ನಿಲ್ದಾಣ'ದ ಕಾರಿಡಾರಿನಲ್ಲಿ ಮಗನಿಗೆ ಪಾಠ ಕಲಿಸತೊಡಗುತ್ತಾಳೆ. ಅವಳ ಆ ವ್ರತಸ್ಥ ಹಟವನ್ನು ಟಿ.ವಿ ವಾಹಿನಿಗಳು ವಿಶೇಷ ಕಾರ್ಯಕ್ರಮದ ರೂಪದಲ್ಲಿ ಬಿತ್ತರಿಸುತ್ತವೆ. ಆಮೇಲೆ ಏನೋ ಜಾದೂ ಆಗಿ ಆ ಬಾಲಕನಿಗೆ ಸಾಮಾಜಿಕ ನ್ಯಾಯ ಸಿಗುತ್ತದೆ ಎಂದೇನೂ ಇಲ್ಲ. ಅದು ಬದುಕನ್ನು ಇನ್ನಷ್ಟು ಸಂಕೀರ್ಣಗೊಳಿಸುತ್ತದೆ. ಎಲ್ಲ ಗೊಡವೆಗಳ ನಡುವೆಯೂ ಆ ಮಹಾತಾಯಿಯ ಏಕಮೇವ ಗುರಿ ಮಗನಿಗೆ ಎಲ್ಲರಂತೆ ಶಿಕ್ಷಣ ದಕ್ಕಿಸಿಕೊಡುವುದು.

ಅವ್ಯಾಜ ಪ್ರೀತಿಯ ಒರತೆಯನ್ನು ತಾಯಿಯ ಪುಟ್ಟ ಕಣ್ಣುಗಳು ತುಳುಕಿಸುತ್ತವೆ. ಇನ್ನೊಂದು ಮಗುವಿಗಾಗಿ ಬಯಸುವ ತಂದೆ ಕೂಡ ತನ್ನ ಮನಸ್ಸು ಬದಲಿಸಿಕೊಂಡು, 'ಆ ಮಗುವಿಗೇ ಬೆಳಕು ಕೊಡೋಣ' ಎನ್ನುತ್ತಾನೆ. ಗೃಹಸ್ಥನಂತೆ ಮೊದಮೊದಲು ಪ್ರಕಟವಾಗುವ ತಂದೆಯ ಪಾತ್ರ, ಆಮೇಲೆ ಸಿಕ್ಕಿದ ಕೆಲಸವನ್ನೆಲ್ಲ ಮಾಡಬಲ್ಲ 'ಜಾಕ್ ಆಫ್ ಆಲ್' ಆಗಿ ಬದಲಾಗುವುದೂ ನಿರ್ದೇಶಕರ ಸಕಾರಾತ್ಮಕ ಚಿಂತನೆಗೆ ಉದಾಹರಣೆ.

ಲಿಯಾಂಗ್ ಜಿಂಗ್‌ಕೆ, ಫೇಂಗ್ ಜುನ್ ಹಾಗೂ ಝಾವೊ ಜು ಅಭಿನಯ ಚಿತ್ರದ ಎಲ್ಲ